**ಅಸಲು ದಾವೆ ನಂಬರ್ 27/20108**

**ಪಿ.ಡಬ್ಲ್ಯೂ: 01**

**ದಿಃ07.07.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ.1, 2, 4 ರಿಂದ 9 ರವರ ಪರ ಶ್ರೀ ಎ.ಎನ್.ಆರ್ ವಕೀಲರಿಂದಃ**

ನಾನು ವಿಧ್ಯಾಭ್ಯಾಸ ಮಾಡಿಲ್ಲ. ನನ್ನ ತಾತನ ಹೆಸರು ಬೂದಯ್ಯಸ್ವಾಮಿ. ನಮ್ಮ ಮನೆತನದ ಹೆಸರು ಅದಿನಾಳು. ಈ ಮೊದಲು ನಾನು ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ನಂಬರ್ 27/2016 ಸಲ್ಲಿಸಿದ್ದು ಅದರಲ್ಲಿ ಈ ಪ್ರಕಣದ 10 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ.

ಸದರಿ ಮೂಲ ದಾವೆ ನಂಬರ್ 27/2016 ರಲ್ಲಿ ಈ ಪ್ರಕರಣದ ಪ್ರತಿವಾದಿ ನಂ.1 ರಿಂದ 9 ರವರು ದಿ:10.03.2016 ರಂದು ದಾವ ಆಸ್ತಿಯನ್ನು ಅತಿಕ್ರಮಣ ಮಾಡಿರುತ್ತಾರೆ ಎಂದು ಹೇಳಿ ಬರೆಸಿದ್ದೇನು. ಈ ಪ್ರಕಣದಲ್ಲಿ 10 ನೇ ಪ್ರತಿವಾದಿ ದಾವ ಆಸ್ತಿಯನ್ನು 2018 ನೇ ಸಾಲಿನಲ್ಲಿ ಅತಿಕ್ರಮಣ ಮಾಡಿರುತ್ತಾರೆ ಎಂದು ಬರೆಸಿರುತ್ತೇನೆ ಅಂದರೆ ಸರಿ. ಮೂಲ ದಾವೆ ನಂಬರ್ 27/2016 ಕಲ್ಲೂರು ಸಿಮೇರೆಯ ಜಮೀನು ಸರ್ವೆ ನಂಬರ್ 672 ಕ್ಷೇತ್ರ 2 ಎಕರೆ 10 ಗುಂಟೆ ಮತ್ತು 1 ಎಕರೆ 25 ಗುಂಟೆಯ ಮೇಲೆ ಸಲ್ಲಿಸಿದ್ದೇನು. ಮೂಲ ದಾವೆ ನಂಬರ್ 27/2016 ಜಮೀನು ಸರ್ವೆ ನಂಬರ್ 672 ಕ್ಷೇತ್ರ 1 ಎಕರೆ 29 ಗುಂಟೆ ಮಾತ್ರ ಸಲ್ಲಿಸಿದ್ದೇನು ಅಂದರೆ ಸರಿ. ಈ ದಾವೆಯನು ಜಮೀನು ಸರ್ವೆ ನಂಬರ್ 672 ಕ್ಷೇತ್ರ 32 ಗುಂಟೆಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತೇನೆ. ಈ ದಾವೆಯಲ್ಲಿ ದಾವ ಆಸ್ತಿ 672/1/ಎಎ ಕ್ಷೇತ್ರ 32 ಗುಂಟೆ ಎಂದು ತೋರಿಸಿರುತ್ತೇನೆ ಅಂದರೆ ಸರಿ. ಮೂಲ ದಾವೆ ನಂಬರ್ 27/2016 ಮತ್ತು ಈ ಪ್ರಕರಣದ ದಾವೆ ಸರ್ವೆ ನಂಬರ್ ಬೇರೆ-ಬೇರೆ ಅಂದರೆ ಸರಿಯಲ್ಲ. ಎರಡು ಪ್ರಕಣದಲ್ಲಿ ಸರ್ವೆ ನಂಬರ್ ಬೇರೆ-ಬೇರೆ ಇದ್ದರು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

2. ಮೂಲ ದಾವೆ ನಂಬರ್ 27/2016 ರಲ್ಲಿ ಹೇಳಿದ ಜಮೀನಿನ ಚೆಕ್ ಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ಸಿದ್ದಯ್ಯಸ್ವಾಮಿ ಇವರ ಜಮೀನು, ಪಶ್ಚಿಮಕ್ಕೆ ಕುರ್ಡಿ ಗ್ರಾಮಕ್ಕೆ ಹೋಗುವ ದಾರಿ, ಉತ್ತರಕ್ಕೆ ಚೆನ್ನಬಸಯ್ಯ ಇವರ ಜಮೀನು, ದಕ್ಷಿಣಕ್ಕೆ ಪಂಪಾಪತಿ ಇವರ ಜಮೀನು ಇರುತ್ತದೆ. ಮೂಲ ದಾವೆ ನಂಬರ್ 27/2016 ರಲ್ಲಿ ದಾವ ಆಸ್ತಿಯ ಪೂರ್ವಕ್ಕೆ ಸಿದ್ದಯ್ಯಸ್ವಾಮಿ ಇವರ ಜಮೀನು, ಪಶ್ಚಿಮಕ್ಕೆ ಚನ್ನಬಸಯ್ಯ, ಉತ್ತರಕ್ಕೆ ಚೂಡಿ ಈರಯ್ಯಸ್ವಾಮಿ ಇವರ ಜಮೀನು, ದಕ್ಷಿಣಕ್ಕೆ ಬಂದೇನವಾಜು ಇವರ ಜಮೀನು ಎಂದು ಬರೆಸಿದ್ದಿ ಅಂದರೆ ಸಾಕ್ಷಿ ಹೌದು ಅವುಗಳನ್ನು ತಪ್ಪಾಗಿ ಬರೆಸಿರುದಾಗಿ ನುಡಿಯುತ್ತಾರೆ. ಪ್ರಸ್ತುತ ದಾವ ಆಸ್ತಿಯ ಚೆಕ್ ಬಂದಿ ಬೇರೆ ಅಂದರೆ ಸರಿ. ಕಾರಣ ಎರಡು ದಾವೆಗಳ ಜಮೀನು ಬೇರೆ-ಬೇರೆ ಅಂದರೆ ಸರಿಯಲ್ಲ. ಸಾಕ್ಷಿ ಪಹಣಿಗಳಲ್ಲಿ ಕ್ಷೇತ್ರ ಬೇರೆ-ಬೇರೆ ಇವೆ ಎಂದು ನುಡಿಯುತ್ತಾರೆ.

3. ದಾವ ಆಸ್ತಿಯಲ್ಲಿ ಸುಮಾರು 30-40 ಮನಗಳನ್ನು ಕಟ್ಟಿಕೊಂಡು ವಾಸ ಇದ್ದಾರೆ ಅಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ಸುಮಾರು 20-25 ವರ್ಷಗಳಿಂದ ಗುಡಿಸಲು ಹಾಗೂ ಮನೆಗಳನ್ನು ಕಟ್ಟಿಕೊಂಡು ಜನರು ವಾಸ ಇದ್ದಾರೆ ಅಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ದಿ:14.05.2003 ರಿಂದ 1 ನೇ ಪ್ರತಿವಾದಿ ಪಕ್ಕ ಮನೆಯನ್ನು ಕಟ್ಟಿಕೊಂಡು ವಾಸ ಇದ್ದಾನೆ ಅಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ದಿ:25.06.2003 ರಿಂದ 2 ನೇ ಪ್ರತಿವಾದಿ ಪಕ್ಕ ಮನೆಯನ್ನು ಕಟ್ಟಿಕೊಂಡು ವಾಸ ಇದ್ದಾನೆ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮನೆಗೆ ವಿದ್ಯುತ ಶಕ್ತಿ ಸಂಪರ್ಕ ಹಾಗೂ ಗ್ರಾಮ ಪಂಚಾಯತಿಯಿಂದ ನೀರು ಪೂರೈಕೆ ಮಾಡಿದ ಬಗ್ಗೆ ಪರವಾನಿಗೆ ಇದೆ ಅಂದರೆ ಸರಿಯಲ್ಲ. ಕಾನೂನುಬದ್ದವಾಗಿ 2 ನೇ ಪ್ರತಿವಾದಿಗೆ ವಿದ್ಯುತ ಸಂಪರ್ಕ ಹಾಗೂ ನೀರಿನ ಸಂಪರ್ಕ ಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ಉಳಿದ ಪ್ರತಿವಾದಿಯರು ದಿ:11.06.1999 ರಿಂದ ದಾವ ಆಸ್ತಿಯಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಂಡು ವಾಸ ಇರುತ್ತಾರೆ ಅಂದರೆ ಸರಿಯಲ್ಲ.

ಸಾಕ್ಷಿ ಮುಂದುವರೆದು ಯಾರು ಮನೆಗಳನ್ನು ಕಟ್ಟಿಕೊಂಡಿರುವುದಿಲ್ಲ ಟಿನ್ ಶೆಡ್ ಹಾಕಿಕೊಂಡು ಇರುತ್ತಾರೆ ಎಂದು ನುಡಿಯುತ್ತಾರೆ.

4. ದಿಃ30.12.2013 ರಂದು 6 ನೇ ಪ್ರತಿವಾದಿಯ ದಾವ ಆಸ್ತಿಯಲ್ಲಿರುವ ಗುಡಿಸಿಲಿಗೆ ಬೆಂಕಿ ಬಿದ್ದಿತ್ತು ಎಂದು ಪೋಲಿಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು ಅಂದರೆ ಸರಿ. ಆ ಸಮಯದಲ್ಲಿ ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಪಂಚನಾಮೆಯಲ್ಲಿ ಕಂದಾಯ ಅಧಿಕಾರಿಗಳು ಪರಿಶೀಲನೆ ಮಾಡಿದಾಗ ದಾವ ಆಸ್ತಿಯಲ್ಲಿ 6 ನೇ ಪ್ರತಿವಾದಿ ಸುಮಾರು 19 ವರ್ಷಗಳಿಂದ ಗುಡಿಸಲು ಹಾಕಿಕೊಂಡು ವಾಸ ಇರುವ ಬಗ್ಗೆ ನಮೂದಿಸಿದ್ದರು ಅಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ವೆಂಕಟೇಶ ತಾಯಿ ಯಲ್ಲಮ್ಮ ಇವರು ಗುಡಿಸಲು ಹಾಕಿಕೊಂಡು ವಾಸ ಇದ್ದಾರೆ ಅಂದರೆ ಸರಿಯಲ್ಲ. ಸದರಿ ವೆಂಕಟೇಶ ಇವರನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಅಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ಸುಮಾರು 25 ವರ್ಷಗಳಿಂದ ನಾವು ಖಬ್ಜಹೊಂದಿಲ್ಲ ಪ್ರತಿವಾದಿಯರೇ ದಾವ ಆಸ್ತಿಯ ಖಬ್ಜಹೊಂದಿರುತ್ತಾರೆ ಅಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ಪ್ರತಿವಾದಿಯರು ಖಬ್ಜಹೊಂದಿರುವುದರಿಂದ ಈ ದಾವಯನ್ನು ಸಲ್ಲಿಸಲು ನನಗೆ ಯಾವುದೇ ಅಧಿಕಾರಿ ಇಲ್ಲ ಅಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ಪ್ರತಿವಾದಿಯರು ವಾಸ ಇದ್ದ ಬಗ್ಗೆ ಗ್ರಾಮಪಂಚಾಯತಿಗೆ ಕಂದಾಯ ಪಾವತಿಸಿರುತ್ತಾರೆ ಅಂದರೆ ಸರಿಯಲ್ಲ. ನಾನು ಕಂದಾಯ ಪಾವತಿಸಿರುತ್ತೇನೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ದಾವ ಆಸ್ತಿಯಲ್ಲಿ ನಾನು ಎಂದೂ ಮಾಲಿಕತ್ವ ಹಾಗೂ ಸ್ವಾಧೀನತೆ ಹೊಂದಿಲ್ಲ ಆದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ ನಂ.3 ಮತ್ತು 10 ರವರು ಪ್ರತಿವಾದ ಪತ್ರ ಸಲ್ಲಿಸದೆ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)**

**ಓ.ಹೇ.ಕೆ.ಸರಿ ಇದೆ**

**ಪ್ರ.ದ.ನ್ಯಾದಂ.ಗಳು, ಮಾನ್ವಿ**